ಹಾವು ಕಚ್ಚಿದಂತೆ ಸಿದ್ದಪ್ಪ ಹಿಮ್ಮೆಟ್ಟಿದ. ಕಣ್ಣು ಕಿರಿದಾಗಿಸಿ ನೋಡಿದ. ರಸ್ತೆಯ ಬೆಳಕಿನಲ್ಲಿ ಅವನು ಮಲಗುವ ಮೆಟ್ಟಿಲ ಮೇಲೆ ಒಂದು ಹಾಸಿಗೆ. ಇನ್ನಷ್ಟು ಗಾಬರಿಗೊಂಡು ಬಗ್ಗಿ ನೋಡಿದ. ಹೌದು ಅದು ಒಂದು ಹಾಸಿಗೆಯೇ. ನಿಧಾನವಾಗಿ ಏನೂ ಅಲ್ಲಾಡಿಸದೆ ಎರಡು ಮೆಟ್ಟಿಲು ಇಳಿದು ಅದನ್ನೇ ನೋಡುತ್ತ ಕುಳಿತ. ಕೈಯಲ್ಲಿದ್ದ ಬೀಡಿ ಜ್ಞಾಪಕವಾಗಿ ಒಂದು ದಮ್ಮು ಎಳೆದ ಹೊಗೆ ಗಂಟಲಿನಲ್ಲಿ ಅಡರಿ ಕೆಮ್ಮಿದ. ಎಡಗೈಯಲ್ಲಿದ್ದ ಹೊರೆಯನ್ನು ಪಕ್ಕ ಇರಿಸಿ ಭಯದಲ್ಲಿ ನಡುಗುತ್ತ ಹಾಸಿಗೆಯನ್ನು ನೋಡುತ್ತ ಕುಳಿತ.

ಸಿದ್ದಪ್ಪ ಅರವತ್ತರ ಮುದುಕ. ಮಗ ಸೊಸೆಯನ್ನು ತೊರೆದು ಬೆಂಗಳೂರು ಸೇರಿದ್ದ. ಸಾರಾಯಿಗೆ ದುಡ್ಡು ಇಲ್ಲದ್ದಿದರೆ ಕೆ.ಆರ್ ಮಾರ್ಕೆಟ್‌ನಲ್ಲಿ ಲಾರಿಯಿಂದ ಸಾಮಾನು ಇಳಿಸುವ ಕೆಲಸಕ್ಕೆ ಹೋಗುತ್ತಿದ್ದ. ಮೈ ಕೈ ನೋವು ಎನಿಸಿದರೆ ಬೀದಿ ಕಸ ಆರಿಸಿ ಹೊಟ್ಟೆ ಹೊರೆಯುತ್ತಿದ್ದ. ಏನು ಕೆಲಸ ಮಾಡಿದರೂ ಮಲಗುವುದು ಮಾತ್ರ ಈ ಅಂಗಡಿಯ ಮೆಟ್ಟಿಲ ಮೇಲೇ. ಆ ಅಂಗಡಿ ತೆರದ್ದದ್ದೇ ಕಾಣದು. ಅದರ ಮುಚ್ಚಿದ ಬಾಗಿಲನ್ನು ಒತ್ತಿಕೊಂಡು ಮಲಗುತ್ತಿದ್ದ ತಲೆಯ ಕೆಳಗೆ ತನ್ನ ಹೊರೆಯನ್ನು ದಿಂಬಾಗಿಸಿ.

ಇಂದು ಅವನ ಜಾಗವನ್ನು ಒಂದು ಹಾಸಿಗೆ ಆಕ್ರಮಿಸಿತ್ತು. ಯಾರಾದರು ಸತ್ತರೆ ಅವರು ಉಪಯೋಗಿಸುತ್ತಿದ್ದ ಹಾಸಿಗೆಯನ್ನು ಹೀಗೆ ಬಿಸಾಕುವ ಪದ್ಧತಿ ಅವನಿಗೆ ಗೊತ್ತಿತ್ತು. ಸತ್ತವನ ಭೂತ ಹಾಸಿಗೆಯಿಂದ ಎದ್ದರೆ? ಇದು ಅವನನ್ನು ಹೆದರಿಸಿತ್ತು. ಸೇದುತ್ತಿದ್ದ ಬೀಡಿ ಕೈ ಸುಟ್ಟಾಗ ಅದನ್ನು ಬಿಸಾಕಿದ. ಕುಕ್ಕರಗಾಲಿನಲ್ಲಿ ಆ ಹಾಸಿಗೆಯನ್ನೇ ನೋಡುತ್ತ ಕುಳಿತ. ಭೂತ ಅದರಿಂದ ಎದ್ದರೆ ಏನು ಮಾಡುವುದು? ಆ ಜಾಗವನ್ನು ಬಿಟ್ಟು ಹೋಗಲಾರ. ಹಾಸಿಗೆಯನ್ನು ತಳ್ಳಿ ತನ್ನ ಜಾಗದಲ್ಲಿ ಮಲಗಲೂ ಆಗದು. ಭೂತ ಈಗ ಏಳಬಹುದು, ಆಗ ಏಳಬಹುದು ಎಂದು ಹೆದರುತ್ತ ಅಲ್ಲೆ ಕುಳಿತ. ಇನ್ನೇನು ನಿದ್ದೆ ಆವರಿಸಿಕೊಂಡಿತು ಎಂದೆನಿಸಿದ ತಕ್ಷಣ ಗಾಬರಿಯಲ್ಲಿ ಎದ್ದು ಪಿಳಿ ಪಿಳಿ ಕಣ್ಣಿನಿಂದ ಹಾಸಿಗೆಯನ್ನು ನೋಡುತ್ತ ಕೂರುತಿದ್ದ. ರಾತ್ರಿ ಒಂದು ಹೊತ್ತಿನಲ್ಲಿ ಜೊಂಪು ಹತ್ತಿತು. ಕನಸಿನಲ್ಲಿ ಹಾಸಿಗೆಯಿಂದ ಭೂತ ಏಳುತಿತ್ತು. ಧುತ್ತೆಂದು ಕಣ್ಣು ತೆರೆದ ಹಾಸಿಗೆ ಸುಮ್ಮನೆ ಬಿದ್ದಿತ್ತು. ಸಿದ್ದಪ್ಪ ಸಣ್ಣಗೆ ನಡಗುತಿದ್ದ. ಹೀಗೇ ಮಲಗುವುದು ಎದ್ದು ಹಾಸಿಗೆಯನ್ನು ಕಾಯುವುದರಲ್ಲೇ ರಾತ್ರಿಯನ್ನು ಕಳೆದ. ಕೊನೆಗೂ ಬೆಳಕು ಹರಿಯಿತು. ಪಕ್ಕದ ಹೋಟೆಲಿಗೆ ತಿಂಡಿ ತಿನ್ನಲು ಹೋದಾಗ ಬರಿ ಇಡ್ಲಿಗೆ ದುಡ್ಡಿರುವ ಅರಿವಾಯಿತು. ಸರಿ ಮಾರ್ಕೆಟ್‌ನ ಕೆಲಸಕ್ಕೆ ಪಯಣಿಸಿದ.

ರಾತ್ರಿ ಕೈಯಲ್ಲಿ ಸಾರಾಯಿ ಬೋಂಡಾ ಪೊಟ್ಟಣ ಹಿಡಿದು ಮಲಗುವ ಜಾಗಕ್ಕೆ ಬಂದಾಗ ಹಾಸಿಗೆ ಇನ್ನು ಅಲ್ಲೆ ಬಿದ್ದಿತ್ತು. ಆಶ್ಚರ್ಯದಿಂದ ಅದನ್ನು ನೋಡಿದ. ಅದನ್ನು ಯಾರೂ ಮುಟ್ಟುವುದಿಲ್ಲ ಎಂದು ತಿಳಿದಿತ್ತು ಆದರು ಏನೋ ಆಶ್ಚರ್ಯ. ಸಾರಾಯಿ ಕುಡಿಯುತ್ತ ಬೋಂಡಾ ತಿನ್ನುತ್ತ ಹಾಸಿಗೆ ನೋಡುತ್ತ ಕುಳಿತ. ಸಾರಾಯಿ ಬೋಂಡಾ ಎರಡೂ ಮುಗಿಯಿತು. ಬಾಟಲಿ ಹಾಗೂ ಕಾಗದವನ್ನು ತನ್ನ ಚೀಲಕ್ಕೆ ತುರುಕಿ ತಲೆ ಮೆಟ್ಟಲಿಗೆ ತಾಕಿಸಿದ. ನಿದ್ದೆ ಬಂದೇ ಬಿಟ್ಟಿತು. ಹಿಂದಿನ ದಿನ ಸರಿಯಾಗಿ ನಿದ್ದೆ ಮಾಡಿರಲಿಲ್ಲ. ಅದರ ಮೇಲೆ ಸಾರಾಯಿಯ ನಶೆ ಎರಡೂ ಸೇರಿ ಚೆನ್ನಾಗಿ ನಿದ್ದೆ ಮಾಡಿದ. ಬೆಳಗ್ಗೆ ಎದ್ದಾಗ ಅವನ ಕೈ ಹಾಸಿಗೆಯ ಮೇಲಿತ್ತು. ಸರ್ರನೆ ಕೈ ತೆಗೆದು ಎದ್ದು ಕುಳಿತು.

ಕಂಠ ಪೂರ್ತಿ ಬಿರಿಯಾನಿ ತಿಂದು ಅಂದು ರಾತ್ರಿ ಮಲಗಲು ಬಂದಾಗ ಹಾಸಿಗೆ ಇನ್ನು ಅಲ್ಲೆ ಇತ್ತು. ಮನಸ್ಸಿನ ಮೂಲೆಯಲ್ಲಿ ಅದನ್ನು ಯಾರಾದರೂ ತೆಗೆದುಕೊಂಡು ಹೋಗಬಹುದು ಎಂಬ ಯೋಚನೆ ಬಂದಿತ್ತು. ಆದರೆ ಅದು ಅಲ್ಲಾಡದೆ ಅಲ್ಲೆ ಬಿದ್ದಿತ್ತು. ನೀಲಿ ಪಟ್ಟೆ ಪಟ್ಟೆ ಇದ್ದ ಆ ಹಾಸಿಗೆ ಇನ್ನೊಂದು ಹಾಸಿಗೆಯನ್ನು ಜ್ಞಾಪಿಸಿತು. ನೆನಪಿನ ಪುಟಗಳನ್ನು ತಿರುವಿದ. ಸಿದ್ದಪ್ಪನ ಹಳ್ಳಿ ಮನೆಯಲಿತ್ತು ಅವನ ಹಾಸಿಗೆ. ಅದೂ ಹೀಗೇ ಇತ್ತು. ಯಾರು ಮಲಗುತ್ತಿರಬಹುದು ಅದರ ಮೇಲೆ? ಆ ಬಿನ್ನಾಣಗಿತ್ತಿಯ ಮಗು ಮಲಗುತ್ತಿರಬಹುದು. ಮುಖ ಸೊಟ್ಟಗೆ ಮಾಡಿ ಬೀಡಿ ಹಚ್ಚಿದ.

ಸಿದ್ದಪ್ಪ ಹೀಗೆ ಅನಾಥವಾಗಿ ರಸ್ತೆಯಲ್ಲಿ ಮಲಗುವ ಅವಶ್ಯಕತೆ ಏನು ಇರಲಿಲ್ಲ. ಪಟ್ಟಾಗಿ ಸೊಸೆ ಮಾಡಿದ್ದು ತಿಂದು ಬೆಚ್ಚಗೆ ತನ್ನ ಸೂರಿನಡಿ ತನ್ನ ಹಾಸಿಗೆಯ ಮೇಲೆ ಪವಡಿಸಬಹುದಿತ್ತು. ಉಹೂಂ ಹಾಗೆ ಮಾಡಲು ಅವನ ಅತಿರೇಕದ ಹೊಟ್ಟೆಕಿಚ್ಚು ಬಿಡುವುದಿಲ್ಲ. ಕೂಲಿ ಆಳಿನ ತರಹ ಮೂಟೆ ಹೊತ್ತು, ರಸ್ತೆಯ ಕಸ ಸಂಗ್ರಹಿಸುವ ಬದಲು ಬೆಳೆ ಬೆಳೆಯುವ ರೈತನಾಗಿರಬಹುದಿತ್ತು. ಮೊಮ್ಮಕ್ಕಳ ಜೊತೆ ಆಟವಾಡುತ್ತ ಸಂತೋಷವಾಗಿರಬಹುದಿತ್ತು. ಏನೇನೋ ಮಾಡ ಬಹುದಿತ್ತು. ಅದ್ಯಾವುದು ಆಗದು. ಎಲ್ಲಾರನ್ನು ಬಿಟ್ಟು ಹಳ್ಳಿಯನ್ನು ತೊರೆದು ಊರು ಸೇರಿ ಅನಾಥನಾಗಿದ್ದ.

ಸಿದ್ದಪ್ಪನಿಗೆ ಒಬ್ಬನೆ ಮಗ. ಮಗನಿಗೆ ಇನ್ನು ಎರಡು ತುಂಬಿರಲಿಲ್ಲ ಆಗಲೆ ಅವನ ಹೆಂಡತಿ ಎರಡನೆ ಪ್ರಸವದಲ್ಲಿ ಮಗುವಿನೊಡನೆ ತೀರಿಕೊಂಡಿದ್ದಳು. ಸಿದ್ದಪ್ಪ ಆ ಒಬ್ಬ ಮಗನನ್ನು ತಂದೆಯಾಗಿ ತಾಯಿಯಾಗಿ ಬೆಳೆಸಿದ್ದ. ಅದರ ವ್ಯಾಮೋಹದಲ್ಲಿ ಅವನಿಗೆ ಇನ್ನೊಮ್ಮೆ ಮದುವೆಯಾಗ ಬೇಕೆಂದು ಅನಿಸಿರಲಿಲ್ಲ. ಸಿದ್ದಪ್ಪ ಬದುಕಿದ್ದು ಆ ಮಗನಿಗಾಗಿ. ಮಗ ಅವನ ಅಪ್ಪನಿಗಾಗಿ. ಕಷ್ಟಪಟ್ಟು ಓದಿಸಿದ್ದ ಮಗನನ್ನು. ಮಗನೂ ಜಾಣನಾಗಿದ್ದ. ಕಷ್ಟಪಟ್ಟು ಓದಿ ಕೃಷಿ ವಿಶ್ವವಿದ್ಯಾಲಯದಲ್ಲಿ ಪದವಿ ಗಿಟ್ಟಿಸಿ ಹಳ್ಳಿಗೆ ಮರಳಿದ್ದ. ತಾನು ಪ್ರೀತಿಸಿದ ಹುಡುಗಿಯನ್ನು ಮದುವೆಯಾಗಿ ಕರೆ ತಂದಿದ್ದ. ಇದೇ ಅವನು ಮಾಡಿದ ಮಹಾಪರಾಧ. ನನಗೆ ನೀನು ನಿನಗೆ ನಾನು ಎಂದಿದ್ದ ಅಪ್ಪ ಮಗನ ಸಂಸಾರದಲ್ಲಿ ಮೂರನೆಯವಳು ಪ್ರವೇಶಿಸಿದ್ದಳು. ಇದು ಸಿದ್ದಪ್ಪನಿಗೆ ನುಂಗಲಾರದ ತುತ್ತಾಗಿತ್ತು. ಮಗ ಎಂದಾದರೂ ಮದುವೆಯಾಗುವನು ಆಗ ಈ ಪರಿಸ್ಥಿತಿ ಬರುವುದು ಎನ್ನುವ ಯೋಚನೆ ಅವನಿಗೆ ಇನ್ನು ಹೊಳೆದಿರಲಿಲ್ಲ. ಮಧ್ಯ ಪ್ರವೇಶಿಸಿದ ಸೊಸೆಯನ್ನು ಸಹಿಸಲಾರ. ಮಗನಿಗೆ ತನಗಿಂತ ಆತ್ಮೀಯವಾದ ಇನ್ನೊಂದು ಜೀವವನ್ನು ಅವನು ಒಪ್ಪಲಾರ. ತನ್ನನ್ನು ತೊರೆದು ಇನ್ನೊಬ್ಬಳನ್ನು ಪ್ರೀತಿಸಿದ್ದ ಮಗನ ಮೇಲಿನ ಸಿಟ್ಟನ್ನು ಸೊಸೆಯ ಮೇಲೆ ತಿರುಗಿಸಿದ. ಮೊಸರಲ್ಲಿ ಕಲ್ಲನ್ನು ಹುಡುಕಲು ಶುರು ಮಾಡಿದ,

ಸೊಸೆ ಮಾಡಿದ್ದರಲೆಲ್ಲ ಏನೋ ಒಂದು ಐಬು ಹುಡುಕುತ್ತಿದ್ದ. ಅವಲಕ್ಕಿಗೆ ಕಾಯಿ ಸಾಲದು, ರೊಟ್ಟಿಗೆ ಬೆಣ್ಣೆ ಇಲ್ಲ, ಮುದ್ದೆಯ ಜೊತೆ ಮಾಡಿದ ಹುಳಿಯಲ್ಲಿ ತರಕಾರಿ ಸಾಲದು.. ಹೀಗೆ ತರಾವರಿ. ಬಾಯಿಗೆ ಒಂದು ತುತ್ತು ಇಡುವ ನಾಟಕ ಮಾಡಿ ಅವಳನ್ನು ಬೈದು ಊಟವನ್ನು ಅರ್ಧದಲ್ಲಿ ಬಿಟ್ಟು ಏಳುವುದು ಸಾಮಾನ್ಯವಾಯಿತು. ಸೊಸೆ ನೊಂದು ಅತ್ತರೆ ಅವನಿಗೆ ಖುಷಿ. ಅವನ ವರ್ತನೆ ಮಗನಿಗೆ ನೋವು ಉಂಟು ಮಾಡುತ್ತಿದೆ ಎನ್ನುವುದನ್ನು ಮರೆತು ಬಿಟ್ಟ. ಒಂದು ದಿನ ಸೊಸೆಗೆ ಮಗ ಅಡುಗೆ ಮನೆಯಲ್ಲಿ ಸಹಾಯ ಮಡುತ್ತಿರುವುದನ್ನು ನೋಡಿದ. ಸಿದ್ದಪ್ಪನಿಗೆ ಇನ್ನಷ್ಟು ರೇಗಿತು. ಮಗ ಅಡುಗೆ ಮನೆಗೆ ಹೋದರೆ ಏನೋ ನೆವ ಮಾಡಿ ಅವನನ್ನು ಹೊರಗೆ ಕರೆದು ಮಾತನಾಡಿಸಲು ಶುರು ಮಾಡಿದ.

ಸಿದ್ದಪ್ಪನ ಮಗ ಹಾಗೂ ಸೊಸೆಗೆ ಅವನ ಅಸುರಕ್ಷತೆಯ ಅರಿವಿತ್ತು. ಅದನ್ನು ನೀಗಿಸಲು ಬಹಳ ಪ್ರಯತ್ನ ಪಟ್ಟರು. ಆದರೆ ಸಿದ್ದಪ್ಪನ ಆಟಗಳು ನಿಲ್ಲುವ ಹಾಗೆ ಕಾಣಲಿಲ್ಲ. ಮಾವ ಮಾವ ಎಂದು ಮಾತನಾಡಿಸುತ್ತಿದ್ದ ಸೊಸೆ ನೋವಾಗಿ ದೂರ ಸರಿದಳು. ತನ್ನನ್ನು ನಿಕೃಷ್ಟವಾಗಿ ಕಾಣುತ್ತಿದ್ದಾಳೆ ಎಂಬ ಕೊರಗು ಈಗ ಸಿದ್ದಪ್ಪನಿಗೆ. ಏನಾದರೂ ಹೇಳುವದಿದ್ದರೆ ಮಗನನ್ನು ಹುಡುಕಿಕೊಂಡು ಅವನ ಹೊಲಕ್ಕೆ ಹೋಗಿ ಹೇಳುತ್ತಿದ್ದ. ನಮ್ಮಿಬ್ಬರ ಮಧ್ಯ ಸೊಸೆಗೇನು ಕೆಲಸವಿಲ್ಲ ಎನ್ನುವ ಧೋರಣೆ. ಅವಳಿಗೆ ಸಂಬಂಧಪಟ್ಟ ವಿಷಯವಾದರೂ ಮಗನಿಗೆ ಮಾತ್ರ ಹೇಳಿ ಬರುತ್ತಿದ್ದ.

ಒಂದು ದಿನ ಸಿದ್ದಪ್ಪನ ಮಗ ಮಲ್ಲಿಗೆ ಹೂವನ್ನು ತಂದು ಹೆಂಡತಿ ಬಚ್ಚಲಲ್ಲಿ ಇರುವುದನ್ನು ಖಚಿತಪಡಿಸಿಕೊಂಡು ಅಡುಗೆ ಮನೆಯಲ್ಲಿ ಇಟ್ಟು ಹೊಲಕ್ಕೆ ಹೋಗಿದ್ದ. ಸಿದ್ದಪ್ಪ ಇದನ್ನು ಗಮನಿಸುತ್ತ ಕುಳಿತ್ತಿದ್ದ. ಮಗ ಹೋಗುತ್ತಿದ್ದ ಹಾಗೆ ಸರಸರನೆ ಅಡುಗೆ ಮನೆಗೆ ಹೋಗಿ ಹೂವನ್ನು ಪೊಟ್ಟಣದಿಂದ ತೆಗೆದು ಎಂದೂ ಹೂವು ಕಾಣದ ಹೆಂಡತಿಯ ಪಟಕ್ಕೆ ಹಾರ ಹಾಕಿದ. ಸ್ನಾನ ಮುಗಿಸಿ ಹೊರಗೆ ಬಂದ ಸೊಸೆ ಹೂವಿನ ಕಂಪನ್ನು ಅರಸಿ ಪಟದ ಹತ್ತಿರ ಬಂದಳು. ಹಾರವನ್ನು ನೋಡಿ ಪಾಪ ಅತ್ತೆಯ ನೆನಪಾಯಿತೇನೊ ಮಾವನಿಗೆ ಎಂದುಕೊಂಡಳು. ಮನೆಯ ಕೆಲಸ ಮುಗಿಸಿ ಹೊಲಕ್ಕೆ ಹೋದಳು. ಕೆಲಸ ಮಾಡುತ್ತ 'ಪಾಪ ಮಾವನಿಗೆ ಅತ್ತೆಯ ನೆನಪಾಯಿತೇನೊ ಹಾರ ಹಾಕಿದಾರೆ ಪಟಕ್ಕೆ' ಎಂದಾಗ ಗಂಡ ಯಾಕೆ ಸಪ್ಪಗಾದ ಎಂದು ಅವಳಿಗೆ ತಿಳಿಯಲಿಲ್ಲ. ಮಡದಿಯ ಮುಡಿಯಲ್ಲಿ ಹೂವಿಲ್ಲ ಅವಳಿಗೆ ಅದರ ಬಗ್ಗೆ ಕಿಂಚಿತ್ತೂ ತಿಳಿಯದು. ಆದರೆ ಧೂಳು ಕವಚಿದ ಪಟಕ್ಕೆ ಹಾರ. ಏನು ನಡಿದಿರಬಹುದು ಎಂದು ಊಹಿಸಿ ಸಪ್ಪಗಾದ ಸಿದ್ದಪ್ಪನ ಮಗ. ತಂದೆಯ ಮೇಲೆ ಸಿಟ್ಟೂ ಬಂದಿತು.